## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 267/2021**

| | | |
|---|---|---|
| **ಸಾಕ್ಷಿದಾರರ ಹೆಸರು** | : ದಿಲೀಪ್ ಕುಮಾರ್ | ಪಿಡಬ್ಲ್ಯೂ : 12 |
| **ತಂದೆಯ / ಗಂಡನ ಹೆಸರು** | : ಶೇಶಯ್ಯ | ಸಿಡಬ್ಲ್ಯೂ : 15 |
| **ವಯಸ್ಸು** | : 43 ವರ್ಷ | |
| **ಉದ್ಯೋಗ** | : ಚಾಲಕ | |
| **ವಾಸಸ್ಥಳ** | : ಭೈರಾಪುರ , ಟಿ ನರಸೀಪುರ ಟೌನ್ , ಮೈಸೂರು ಜಿಲ್ಲೆ | |

**ಸಾಕ್ಷಿಯನ್ನು ಈ ದಿನ ದಿಃ 06.12.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಸಹಿ ಹಾಕುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ 16 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 16(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಈ ಸಹಿಯನ್ನು ನಾನು ಟಿ ನರಸೀಪುರ ಪೋಲೀಸಿ ಠಾಣೆಯಲ್ಲಿ ದಿಃ 30.07.2021 ರಂದು ಹಾಕಿರುತ್ತೇನೆ. ಆ ದಿನ ನಾನು ಮತ್ತು ಚಾ,ಸಾ. 16 ಯಾವುದೋ ಕೆಲಸದ ನಿಮಿತ್ತ ಟಿ ನರಸೀಪುರ ಪೋಲೀಸ್ ಠಾಣೆಗೆ ಹೋಗಿದ್ದೆವು. ಚಾ,ಸಾ, 30 ರವರು ಆರೋಪಿ ಧರಿಸಿದ್ದ ಬಟ್ಟೆ ಗಳನ್ನು ಅಮಾನತ್ತು ಪಡಿಸಿಕೊಳ್ಳಬೇಕಾಗಿರುತ್ತದೆ , ಮಹಜರ್ ಗೆ ಸಹಿ ಹಾಕಿ ಎಂದು ಕರೆದರು. ಆರೋಪಿ

ಧರಿಸಿದ್ದ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡರು. ಆರೋಪಿಗೆ ಆತನ ಮನೆಯಿಂದ ಬೇರೆ ಬಟ್ಟೆಗಳನ್ನು ತರಿಸಿ ಧರಿಸಲು ಕೊಟ್ಟರು. ಆತ ಧರಿಸಿದ್ದ ತುಂಬು ತೋಳಿನ ಶರ್ಟ ಮತ್ತು ಕಪ್ಪು ಪ್ಯಾಂಟ್ ನ್ನು ಅಮಾನತ್ತು ಪಡಿಸಿಕೊಂಡರು. ಆ ಸಮಯದಲ್ಲಿ ಪೋಟೋ ತೆಗೆದರು. ಈ ತೋರಿಸುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ. ಅವು ಒಟ್ಟು 4 ಪೋಟೋಗಳು ಇದ್ದು , ಅವುಗಳನ್ನು ಈಗ ನಿಪಿ 17 ರಿಂದ 20 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ದಿನ ಅಮಾನತ್ತು ಪಡಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಶರ್ಟ ಮತ್ತು ಪ್ಯಾಂಟ್ ನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಎಂ ಒ 6 ಮತ್ತು 7 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆ ಬಿಳಿ ಬ್ಯಾಗ್ ಗಳ ಮೇಲೆ ಇರುವ ಚೀಟಿಗಳ ಮೇಲೆ ನನ್ನ ಸಹಿ ಇರುತ್ತವೆ. ಬಟ್ಟೆಗಳು ಇರುವ ಪೋಟೋವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ನಿಪಿ 21 ಎಂದು ಗುರುತುಪಡಿಸಿಕೊಳ್ಳಲಾಯಿತು.

2. ಆ ದಿನ ಪೋಲೀಸ್ ಠಾಣೆಯಲ್ಲಿದ್ದ ವ್ಯಕ್ತಿಯನ್ನು ನೋಡಿ ಗುರುತಿಸುತ್ತೇನೆ. ಆತ ಇಂದು ನ್ಯಾಯಾಲಯದ ಮುಂದಿದ್ದಾನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ. ಮತ್ತು ಆರೋಪಿ ತಾನು ಪಾಟೀ ಸವಾಲು ಮಾಡುವುದಿಲ್ಲ ಎಂದಿದ್ದರಿಂದ, ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**